ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 36-46
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಜೈನ ಧರ್ಮದ ಪ್ರಭಾವ

**ಡಾ. ಜಯದೇವ ಸಿರಳ್ಳಿ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ (ಗಾಂಧಿಪುರ)

***Abstract:***
*ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಜೈನ ಧರ್ಮವು ಮಹತ್ವದ ಮತ್ತು ವಿಶಿಷ್ಟವಾದ ಪಾತ್ರವನ್ನು ವಹಿಸಿದೆ. ಕ್ರಿ.ಶ. ಪ್ರಾರಂಭಿಕ ಶತಮಾನಗಳಿಂದಲೇ ಜೈನ ಧರ್ಮದ ತತ್ವ, ನೈತಿಕ ಮೌಲ್ಯಗಳು ಹಾಗೂ ಅಹಿಂಸಾ ಸಿದ್ಧಾಂತಗಳು ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ. ಪಂಪ, ಪೊನ್ನ, ರನ್ನ ಮೊದಲಾದ ಜೈನ ಕವಿಗಳು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕಾವ್ಯಕೃತಿಗಳನ್ನು ನೀಡುವುದರ ಮೂಲಕ ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಕಾರಣರಾಗಿದ್ದಾರೆ. ಆದಿಪುರಾಣ, ಶಾಂತಿಪುರಾಣ, ಅಜಿತಪುರಾಣ ಮುಂತಾದ ಕೃತಿಗಳಲ್ಲಿ ಜೈನ ಧಾರ್ಮಿಕ ಚಿಂತನೆ, ಮಾನವೀಯ ಮೌಲ್ಯಗಳು ಮತ್ತು ನೈತಿಕ ಆದರ್ಶಗಳು ಪ್ರತಿಬಿಂಬಿತವಾಗಿವೆ. ಜೈನ ಕವಿಗಳ ಕೃತಿಗಳ ಮೂಲಕ ಚಂಪೂ ಸಾಹಿತ್ಯ, ಪುರಾಣ ಸಾಹಿತ್ಯ ಹಾಗೂ ಧಾರ್ಮಿಕ ಸಾಹಿತ್ಯದ ಬೆಳವಣಿಗೆಗೆ ಹೊಸ ಆಯಾಮ ದೊರೆಯಿತು. ಜೈನ ಧರ್ಮದ ಆಶ್ರಯ, ಮಠಗಳು ಮತ್ತು ವಿದ್ವಾಂಸರ ಕೊಡುಗೆ ಕನ್ನಡ ಭಾಷೆ ಹಾಗೂ ಸಾಹಿತ್ಯದ ಅಭಿವೃದ್ಧಿಗೆ ಪೂರಕವಾಯಿತು. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಜೈನ ಧರ್ಮದ ಪ್ರಭಾವವನ್ನು ಐತಿಹಾಸಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನಗಳಿಂದ ಈ ಅಧ್ಯಯನವು ವಿಶ್ಲೇಷಿಸುತ್ತದೆ.*

***Keywords:*** *ಜೈನ ಧರ್ಮ, ಕನ್ನಡ ಸಾಹಿತ್ಯ, ಪಂಪ, ಜೈನ ಕಾವ್ಯ, ಚಂಪೂ ಸಾಹಿತ್ಯ*

## ಪೀಠಿಕೆ

ಕನ್ನಡ ಸಾಹಿತ್ಯ ಮತ್ತು ಧರ್ಮಗಳಿಗಿರುವ ಸಂಬಂಧ ನಿಕಟವಾದುದು ಮತ್ತು ಪ್ರಾಚೀನ ವಾದುದಾಗಿದೆ. ಸಾಹಿತ್ಯವನ್ನು ಪೋಷಿಸಿ ಉಳಿಸಿ-ಬೆಳೆಸಿಕೊಂಡು ಬಂದ ಪ್ರಮುಖ ವ್ಯವಸ್ಥೆಗಳಲ್ಲಿ ಧರ್ಮ ಅತ್ಯಂತ ಪ್ರಮುಖವಾದುದು. ಕನ್ನಡ ಸಾಹಿತ್ಯದ ಆರಂಭಿಕ ಬೆಳವಣಿಗೆಗೆ ಜೈನ ಧರ್ಮ ಮತ್ತು ಜೈನ ಮುನಿಗಳ ಕೊಡುಗೆ ಅಪಾರವಾದುದಾಗಿದೆ. ಕನ್ನಡ ಸಾಹಿತ್ಯದ ಮೇಲೆ ಧರ್ಮ ಎಂಥ ಪ್ರಭಾವವನ್ನು ಬೀರಿತ್ತು ಎಂಬುದಕ್ಕೆ ಮಹಾಕವಿ ಪಂಪನು ತನ್ನ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿನ ಹೇಳಿಕೆಯನ್ನು ಗಮನಿಸಬಹುದು. "ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗಳ್ತೆ ಲಾಭ ಮೆಂ" ಮಹಾಕವಿ ಪಂಪನ ಕಾವ್ಯದ ಸಾಲಿನ ಆಶಯದಲ್ಲಿ ಲೌಕಿಕತೆಗಿಂತ ಧಾರ್ಮಿಕತೆ ಗೆದ್ದು ನಿಲ್ಲುವುದನ್ನು ಕಾಣುತ್ತೇವೆ. ಪರರಿಂದ ಸಾಧಿಸಲಾಗದ ಕವಿತೆಯಿಂದಾಗುವ ಪ್ರಯೋಜನ 'ವನ್ನು ಧಾರ್ಮಿಕ ನಿಲುವಿನ ಕಾವ್ಯದಿಂದ ಸಾಧಿಸಲು ಸಾಧ್ಯವೆಂಬುದನ್ನು ಮಹಾಕವಿ ಪಂಪ ಇಲ್ಲಿ ತುಂಬಾ ಅರ್ಥವತ್ತಾಗಿ ಪ್ರತಿಬಿಂಬಿಸಿದ್ದಾನೆ.

ಜೈನ ಧರ್ಮವು ಅಹಿಂಸೆ, ಸತ್ಯ, ಸಂಪತ್ತಿನ ವ್ಯಾಮೋಹ ಇಲ್ಲದಿರುವುದು, ಬ್ರಹ್ಮಚರ್ಯ ಮುಂತಾದ ತತ್ವಗಳನ್ನು ಒಳಗೊಂಡಿದ್ದರಿಂದ

***Please cite this article as:*** ಜಯದೇವ ಸಿರಳ್ಳಿ. (2026). ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಜೈನ ಧರ್ಮದ ಪ್ರಭಾವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 36–46

ಕರ್ನಾಟಕವನ್ನು ಆಳಿದ ಅನೇಕ ರಾಜಮನೆತನಗಳು ಜೈನ ಧರ್ಮಕ್ಕೆ ಆಶ್ರಯವನ್ನು ನೀಡಿದವು. ಜೈನ ಕವಿಗಳು ಸಂಸ್ಕೃತ ಮತ್ತು ಪ್ರಾಕೃತ ಕಾವ್ಯ ಪರಂಪರೆಯೊಂದಿಗೆ ಸ್ಥಳಿಯ ಕನ್ನಡವನ್ನು ಬೆರಸಿ ಉನ್ನತ ಮಟ್ಟದ ಮಾರ್ಗ ಸಾಹಿತ್ಯ ಪದ್ಧತಿಯನ್ನು ಹುಟ್ಟು ಹಾಕಿದರು. ಇದರಿಂದಾಗಿ ಕರ್ನಾಟಕದಲ್ಲಿ ಜೈನಧರ್ಮವು ಪ್ರಬುದ್ಧವನ್ನು ಹೊಂದಿ ಕ್ರಿ.ಶ ಆರಂಭದಿಂದ ಕ್ರಿ.ಶ ಹದಿಮೂರನೆಯ ಶತಮಾನದವರೆಗೆ ಹಾಗೂ ನಂತರವೂ ಅದು ಜನಪ್ರೀಯ ಧಾರ್ಮಿಕ ಶಕ್ತಿಯಾಗಿದ್ದುದಲ್ಲದೆ ಕರ್ನಾಟಕ ಸಂಸ್ಕೃತಿಯ ಪ್ರಗತಿಗೆ ವಿಶಿಷ್ಟವಾದ ಸಾಹಿತ್ಯಿಕ ಕಾಣಿಕೆಯನ್ನು ಸಲ್ಲಿಸಿದೆ.

ಜೈನ ಧರ್ಮಾವಲಂಬಿಗಳಾದ ಅನೇಕ ಅರಸರು ಹಾಗೂ ಉದಾತ್ತ ಭಾವನೆಯ ಜನತೆ ಕರ್ನಾಟಕದ ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಹಲವು ಶತಮಾನಗಳ ಕಾಲ ತಮ್ಮ ಹೆಗ್ಗುರುತನ್ನು ಮೂಡಿಸಿದ್ದಾರೆ. ಕನ್ನಡ ಸಾಹಿತ್ಯ ಬೆಳವಣಿಗೆಯ ಆರಂಭದ ದಿನಗಳಲ್ಲಿ ಅದನ್ನು ಬೆಳೆಸಿ ಪೋಷಿಸಿದವರು ಜೈನ ವಿದ್ವಾಂಸರು. ಆದರೆ ಇವರು ತಮ್ಮ ಕೃತಿಗಳನ್ನು ಪ್ರಾಕೃತ ಮತ್ತು ಸಂಸ್ಕೃತದಲ್ಲಿ ರಚಿಸಿದರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲವು ಮಹತ್ವದ್ದಾಗಿದೆ. ಈ ಕಾಲವನ್ನು ಕನ್ನಡ ಸಾಹಿತ್ಯದಲ್ಲಿ ಜೈನ ಕವಿಗಳ ಕಾಲ ಎಂದು ವಿದ್ವಾಂಸರು ಕರೆದಿದ್ದಾರೆ. ಇದಕ್ಕೆ ಕಾರಣ ಅಂದಿನ ಸಾಹಿತ್ಯ ಕ್ಷೇತ್ರ ಸಂಪೂರ್ಣವಾಗಿ ಜೈನ ವಿದ್ವಾಂಸರುಗಳಿಂದ ಆವೃತವಾಗಿದ್ದಿತು. ಜೈನ ಧರ್ಮದ ಅನೇಕ ಕವಿಗಳು ರಾಜರ ಆಶ್ರಯದಲ್ಲಿದ್ದುಕೊಂಡು ಅನೇಕ ಶ್ರೇಷ್ಠ ಕಾವ್ಯಗಳನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯವನ್ನು ಉನ್ನತಮಟ್ಟಕ್ಕೇರಿಸಿದರು.

**ಪಂಪ**

ಪಂಪನು ವಿಶಿಷ್ಠ ಧಾರ್ಮಿಕ ಮನೋಭಾವದ ಕವಿಯಾದುದರಿಂದ ಈತನು “ಲೌಕಿಕ ಕಾವ್ಯ”ವನ್ನು ರಚಿಸುವುದರ ಜೊತೆಗೆ “ಧಾರ್ಮಿಕ ಕಾವ್ಯ”ವನ್ನೂ ರಚಿಸಿದನು. “ಲೌಕಿಕ ಕಾವ್ಯ”ದಲ್ಲಿ ಲೌಕಿಕವನ್ನು ಬೆಳಗಿದ ಪಂಪ, ತನ್ನ ಧಾರ್ಮಿಕ ಕಾವ್ಯದಲ್ಲಿ ಧರ್ಮವನ್ನು ಬೆಳಗಿದನು. ಅಂತೆಯೇ ತನ್ನ “ವಿಕ್ರಮಾರ್ಜುನ ವಿಜಯದಲ್ಲಿ” “ಬೆಳಗುವೆನಿಲ್ಲಿ ಲೌಕಿಮುಮಲ್ಲಿ ಜಿನಾಗವಮುಮಂ” ಎಂದು ಹೇಳಬೇಕಾಯಿತು. ಪಂಪ ತನ್ನ “ಆದಿಪುರಾಣ” ಧಾರ್ಮಿಕ ಮಹಾಕಾವ್ಯದಲ್ಲಿ ಧರ್ಮ ಮತ್ತು ಕಾವ್ಯ ಧರ್ಮ ಕುರಿತಂತೆ ವಿಶಿಷ್ಟ ಮನೋಭಾವವನ್ನು ಪ್ರತಿಪಾದಿಸಿದ್ದಾರೆ. “ಆದಿಪುರಾಣದೊಳರಿವುದು ಕಾವ್ಯ ಧರ್ಮಂ ಧರ್ಮಮುಮಂ” ಎಂದು ಕಾವ್ಯ ಧರ್ಮ ಹಾಗೂ ಧರ್ಮಗಳ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸಿ ಆ ಸಾಧನೆಯಲ್ಲಿ ಪಂಪ ಯಶಸ್ಸು ಸಾಧಿಸಿದುದನ್ನು ಕಾಣುತ್ತೇವೆ. ಜಿನಸೇನಾಚಾರ್ಯರ ಪೂರ್ವಪುರಾಣವನ್ನು, ಪೂರ್ವ ಮತ್ತು ಉತ್ತರ ಪುರಾಣಗಳೆರಡರಲ್ಲಿ ಆದಿದೇವನಾದ ವೃಷಭ ತೀರ್ಥಂಕರ ಮತ್ತು ಅವನ ಮಗನಾದ ಆದಿ ಚಕ್ರವರ್ತಿ ಭರತ, ಅವನ ತಮ್ಮ ಬಾಹುಬಲಿಯ ಕಥೆಯನ್ನು ವಿಸ್ತಾರವಾಗಿ ಹೇಳಿದ್ದಾನೆ. ಜಿನಮುನಿಗಳ, ಗುರುಪರಂಪರೆಯ ಸ್ತುತಿ, ತನ್ನ ಕಾವ್ಯದ ಸ್ವರೂಪ, ವೈಶಿಷ್ಟ್ಯಗಳು ಮುಂತಾದವುಗಳನ್ನು ಹೇಳಿ ಪಂಪ ಮಹಾಬಲನ ಜನ್ಮವಿವರಗಳಿಂದ ಆದಿಪರಾಣದ ಕಥೆಯನ್ನು ಪ್ರಾರಂಭಿಸುತ್ತಾನೆ. ಮೂಲದ ಕಥಾ ಚೌಕಟ್ಟನ್ನು ಸ್ವಲ್ಪವೂ ಬದಲಾಯಿಸುವ ಸ್ವಾತಂತ್ರ್ಯ ವಹಿಸಲು ಕವಿಗೆ ಸಾಧ್ಯವಾಗಿಲ್ಲ. ವರ್ಣನೆಗಳಲ್ಲಿ, ಪ್ರಸಂಗಗಳಲ್ಲಿ ಮಾತ್ರ ಸ್ವಂತಿಕೆ ತೋರಿಸಲು ಪ್ರಯತ್ನ ಮಾಡಿದ್ದಾನೆ. “ಪಂಪ ಜಿನಪುರಾಣವನ್ನು ಜಿನಾಗಮವನ್ನು ಹೇಳುತ್ತಿದ್ದೇನೆಂದು ಹೇಳಿಕೊಂಡರೂ ಅದಕ್ಕೆ ಸಂಬಂಧಿಸಿದ ಭಾಗಗಳು ಎಷ್ಟು ನೀರಸವಾಗಿ ನಿರೂಪಿತವಾಗಿವೆಯೆಂದರೆ ಆದಿಪುರಾಣದಲ್ಲಿ ಪ್ರಕೃತಿ ವರ್ಣನೆ, ಪ್ರೇಮ, ವಿರಹಗಳನ್ನು ತೆಗೆದುಹಾಕಿದರೆ ಪಂಪನ ಬಗ್ಗೆ ಹೇಳಲು ಏನೂ ಉಳಿಯುವುದಿಲ್ಲ. ಪಂಪನಿಗೆ ಆದಿಪುರಾಣದಲ್ಲಿ ಪ್ರಕೃತಿಯೇ ಮನಸ್ಸನ್ನು ಸೂರೆಗೊಂಡು ಗಮನ ಪಡೆದಿದೆಯೇ ಹೊರತು”[1] ಕಥೆಯ ಪಾತ್ರಗಳಿಂದಲ್ಲ. ಲಲಿತಾಂಗ,

ಸ್ವಯಂಪ್ರಭೆಯರ ಬಗ್ಗೆ ಪಂಪ ತುಂಬ ರಮ್ಯವಾದ ವರ್ಣನೆಗಳನ್ನು ಕೊಡುತ್ತಾನೆ.

ಆದಿಪುರಾಣದಲ್ಲಿ ಆದಿದೇವನ ಭವಾವಳಿಗಳು ಒಂದಾದಮೇಲೊಂದರಂತೆ ಮುಂದುವರೆದರೂ ಅವುಗಳಲ್ಲಿ ವೈವಿಧ್ಯವಾಗಲೀ ಬೆಳವಣಿಗೆಯಾಗಲೀ ಇಲ್ಲ. ಆದ್ದರಿಂದಲೇ ಪಂಪನಿಗೆ ಪಾತ್ರಗಳ ಮೂಲಕ ಕಾವ್ಯವನ್ನು ಅನಾವರಣಗೊಳಿಸಿ ಬೆಳೆಸಿಕೊಂಡು ಹೋಗುವುದು ಸಾಧ್ಯವಾಗಿಲ್ಲ. ಒಂದೊಂದು ಜನ್ಮದಲ್ಲೂ ಹುಟ್ಟಿ ಹಿಂದಿನದಕ್ಕಿಂತ ಹೆಚ್ಚು ಸುಖವನ್ನನುಭವಿಸಿ ಅದು ಬೇಗ ಕೈತಪ್ಪುತ್ತದೆಂದು ತಿಳಿದಾಗ ಜಿನಪೂಜೆಮಾಡಿ ಮುಂದಿನ ಜನ್ಮಕ್ಕೆ ಹೋಗುವ ಈ ಕಥಾ ಸ್ವರೂಪ ಒಂದು ಸೂತ್ರಕ್ಕೆ ಬದ್ಧವಾದ ಯಾಂತ್ರಿಕ ಪುನರಾವರ್ತನೆಯಂತಿರುವು ದರಿಂದ ಪಂಪನಿಗೆ ಅಲ್ಲಿ ಸ್ವಾತಂತ್ರ್ಯ ಕಡಿಮೆಯೇ. ಆದ್ದರಿಂದಲೇ ಅವನು ಜನ್ಮಾವಳಿಗಳಲ್ಲಿ ಪ್ರಿಯ–ಪ್ರಿಯತಮೆಯರ ಕಥೆ ಪ್ರಸಂಗಗಳಿರುವಾಗ ತನ್ನ ರಚನಾ ಕೌಶಲ್ಯವನ್ನು ಪ್ರದರ್ಶಿಸಲು ತೊಡಗುತ್ತಾನೆ. ಆ ಮೂಲಕ ತನ್ನ ಧಾರ್ಮಿಕ ಕಾವ್ಯದಲ್ಲಿ ಓದುಗರಿಗೆ ಆಸಕ್ತಿ ಹುಟ್ಟುವಂತೆ ಮಾಡುತ್ತಾನೆ. ಮಗಧ ಸಾಮ್ರಾಜ್ಯದ ಸಹೋದರರಾದ ಭರತ ಮತ್ತು ಬಾಹುಬಲಿ ಮಧ್ಯ ಯುದ್ಧ ನಡೆದು ಅದರಲ್ಲಿ ತಮ್ಮನಾದ ಬಾಹುಬಲಿಯು ವಿಜಯಿಶಾಲಿಯಾದನು. ಜೈನಪುರಾಣಗಳಲ್ಲಿ ಬಾಹುಬಲಿ ಅಪರೂಪದ ವ್ಯಕ್ತಿಯಾಗಿ ಕಂಡು ಬರುತ್ತಾನೆ. ಜಯ ದೊರೆತು ಸರ್ವಸ್ವವೂ ತನ್ನ ಕಾಲ ಮೇಲೆ ಬಿದ್ದಾಗ ಇವನಂತೆ ಒದ್ದು ಹೋಗುವವರಾರೂ ಕಾಣಿಸುವುದಿಲ್ಲ. ಎಲ್ಲ ಭೋಗವನ್ನು ಅನುಭವಿಸಿದ ನಂತರ ಎಲ್ಲರೂ ಕುಂಟು ನೆಪದ ಮೇಲೆ ಅದನ್ನು ತ್ಯಜಿಸಿ ಹೋಗುತ್ತಾರೆ. ಆ ದೃಷ್ಟಿಯಿಂದ ಬಾಹುಬಲಿಯ ವ್ಯಕ್ತಿತ್ವ ವಿಶಿಷ್ಟವಾಗಿ ಕಂಡು ಬರುತ್ತದೆ.

ಆದಿಪುರಾಣದ ಕಥಾವಸ್ತುವು ಪಂಪನ ಸ್ವತಂತ್ರ ಸೃಷ್ಟಿಯಾಗಲಿ ಸಮಕಾಲೀನ ವಸ್ತುವಾಗಲಿ ಅಲ್ಲ. ಜೈನ ಪರಂಪರೆಯ ಮಹಾಪುರಾಣದ ಕಥೆಯನ್ನು ತೆಗೆದುಕೊಂಡು ಕನ್ನಡದಲ್ಲಿ ಹೇಳಿರುವುದರಿಂದ, ಕಥೆಯ ಮೂಲ ವಸ್ತು ಬೇರೆಯವರದಾದರೂ ಕವಿ ತನ್ನ ಜೀವನಾನುಭವ ಮತ್ತು ಪರಿಸರ ವಿಚಾರಗಳನ್ನು ಅಭಿವ್ಯಕ್ತಗೊಳಿಸಿದ್ದಾನೆಂದು ಗಮನಿಸಬೇಕು. ಆದಿಪುರಾಣದಲ್ಲಿ ಇರಬಹುದಾದ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳು ಪಂಪ ಮತ್ತು ಅವನಿಗಿಂತ ಹಿಂದಿನ ಜೈನ ಪರಂಪರೆಯನ್ನು ಪ್ರತಿನಿಧಿಸುತ್ತವೆ ಎಂಬ ತಿಳಿವಿನಲ್ಲೇ ಆದಿಪುರಾಣವನ್ನು ಕಾಣಬೇಕಾಗುತ್ತದೆ.

**ವಿಕ್ರಮಾರ್ಜುನ ವಿಜಯ:** ಆದಿಕವಿ ಪಂಪನು ಚಾಲುಕ್ಯ ದೊರೆ ಎರಡನೆಯ ಅರಿಕೇಸರಿಯ ರಾಜಾಶ್ರಯದಲ್ಲಿದ್ದವನು. ಈತ ತನ್ನ ಅನ್ನದ ಋಣಕ್ಕಾಗಿ ತನಗೆ ಆಶ್ರಯ ನೀಡಿದ ಅರಿಕೇಸರಿಯನ್ನು ತನ್ನ 'ವಿಕ್ರಮಾರ್ಜುನ ವಿಜಯ' ಮಹಾಕಾವ್ಯದ ಕಥಾನಾಯಕ ಅರ್ಜುನನೊಂದಿಗೆ ಅಭೇದ್ಯವಾಗಿ ಹೋಲಿಸಿ ಕಾವ್ಯ ಬರೆದನು. ಹೀಗಾಗಿ ಇಲ್ಲಿ ಅರಿಕೇಸರಿ ಬೇರೆಯಲ್ಲ, ಅರ್ಜುನ ಬೇರೆಯಲ್ಲ. ಇಲ್ಲಿ ಅರಿಕೇಸರಿಯೇ ಅರ್ಜುನ; ಅರ್ಜುನನೇ ಅರಿಕೇಸರಿ. ಈ ಅಭೇದ್ಯ ಕಲ್ಪನೆಯನ್ನು ಕನ್ನಡ ಕಾವ್ಯ ಪ್ರಪಂಚದಲ್ಲಿ ತಂದು, ರಾಜಾಶ್ರಯ ಮತ್ತು ಕನ್ನಡ ಸಾಹಿತ್ಯಗಳಿಗೆ ತಳುಕು ಹಾಕಿದ ಪ್ರಥಮ ಕವಿ ಪಂಪನೇ ಆಗಿದ್ದಾನೆ. "ಅರಿಕೇಸರಿಯಲ್ಲಿ ತನಗೆ ಪ್ರೀತಿಯಿರುವುದರಿಂದ ಅವನನ್ನು ಅರ್ಜುನನಲ್ಲಿ ಸಮೀಕರಿಸಿ ಹೇಳುತ್ತೇನೆ ಎಂದು ಪಂಪ ಹೇಳಿಕೊಂಡಿದ್ದಾನಷ್ಟೆ. ಲೋಕ ಇರುವವರೆಗೆ ಅರಸನ ಹೆಸರು ಉಳಿಸುವ ಅವನ ರಾಜಭಕ್ತಿಯೇನೋ ಈ ಕಾವ್ಯದಲ್ಲಿ ಸಫಲವಾಗಿದೆ. ಆದರೆ ಅವನು ಅಂದುಕೊಂಡದ್ದಕ್ಕಿಂತ ಬೇರೆಯಾದ ವ್ಯಕ್ತಿಗಳೇ ಮಹಾ ಪುರುಷರೂ ಅಭಿಮಾನಧನರೂ ಆಗಿ ಅವರ ಕತೆಯೇ ಇಲ್ಲಿ ರಸಾಯನವೂ ಆಗಿದೆ. ಅರ್ಜುನನ ಬಿಗಿ ಹಿಡಿದಿಟ್ಟ ವ್ಯಕ್ತಿತ್ವದ ಹೊಗಳಿಕೆ ಅಲ್ಲಲ್ಲಿ ಬಂದರೂ ಸನ್ನಿವೇಶದಲ್ಲಿ ತೋರಿಸುವ ವರ್ತನೆಯ ಬಲದಿಂದಾಗಿ ಅವನು ಎಲ್ಲಿಯೂ ದೊಡ್ಡವನೆನಿಸುವುದಿಲ್ಲ. ಬದಲಾಗಿ ಪಂಪಭಾರತ ವೆಂದರೆ ದುರ್ಯೋಧನ, ಕರ್ಣರ ಕಥಾನಕವೇ

ಅನ್ನಿಸುವಷ್ಟು ಅವರು ದೊಡ್ಡವರಾಗಿ ಕಾಣಿಸುತ್ತಾರೆ. ಕರ್ಣನ ವಿಚಾರಗಳು ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುವುದಲ್ಲದೆ, ಅವನ ಮುಂದೆ ವಿಕ್ರಮಾರ್ಜುನ ಹೊಳಪಿಲ್ಲದ ಮಣಿಯಾಗುತ್ತಾನೆ."[2]

"ಮಹಾಭಾರತದಲ್ಲಿ ಅರಿಕೇಸರಿಯ ವಂಶಾವಳಿಯನ್ನು ಸೇರಿಸಿದ್ದು, ಅರ್ಜುನನ ಹೆಸರಿನ ಜೊತೆಗೆ ಅರಿಕೇಸರಿಯ ಬಿರುದುಗಳನೆಲ್ಲಾ ಜೋಡಿಸಿದ್ದು, ಕೃಷ್ಣನ ಹೆಸರನ್ನು ಕಿತ್ತು ಅರ್ಜುನನಿಗೆ ಕೊಟ್ಟಿದ್ದು, ಇವೆಲ್ಲಾ ಬದುಕಿನ ಸೌಕರ್ಯಕ್ಕಾಗಿ ಪಂಪ ಮಾಡಿಕೊಂಡ ಒಡಂಬಡಿಕೆ ಎಂದುಕೊಳ್ಳಬಹುದು."[3] ಕರ್ಣ ದುರ್ಯೋಧನರು ಹೊಸಹುಟ್ಟು ಪಡೆದಿರುವ ದೃಷ್ಟಿಯಿಂದ ನೋಡಿದರೆ ಪಂಪನ ಕಾವ್ಯ ಮಹಾಭಾರತವನ್ನು ಕುರಿತ ಹೊಸ ಚಿಂತನೆಯಾಗಿದೆ. ಸದ್ಯಕ್ಕೆ ಮಹಾಭಾರತಕ್ಕೆ ಪಂಪನೇ ಕನ್ನಡದ ಮೊದಲ ವಿಮರ್ಶಕನಾಗಿದ್ದಾನೆ. ಮಹಾಭಾರತವೊಂದು ಐತಿಹಾಸಿಕ ಕಾವ್ಯವೆನ್ನುವುದಕ್ಕೆ ತನಗಿದ್ದ ಮಿತಿಯಲ್ಲೇ ವ್ಯಾಖ್ಯಾನಕಾರನೂ ಆದದ್ದಲ್ಲದೆ ಅದನ್ನು ಕನ್ನಡದಲ್ಲಿ ಮತ್ತೇ ಮೈದಳಿಯುವಂತೆ ಮಾಡಿ ಕೃತಾರ್ಥನಾಗಿದ್ದಾನೆ.

ಪಂಪ ಹಾಕಿಕೊಟ್ಟ ಆಗಮಿಕ–ಲೌಕಿಕ ಕಾವ್ಯ ಮಾರ್ಗ ಅಥವಾ ಪರಂಪರೆಯಲ್ಲಿಯೇ ಅನಂತರದ ಅನೇಕ ಕವಿಗಳು ನಡೆದು ತೋರಿದರು. ಪಂಪ ಹೊತ್ತಿಸಿದ ಈ ಬೆಳಕಿನಲ್ಲಿ ಮುಂಬಂದ ಅನೇಕ ಜೈನ ಕವಿಗಳು ತಮ್ಮ ಆಗಮಿಕ–ಲೌಕಿಕ ಕಾವ್ಯಗಳನ್ನು ಬೆಳಗಿದರು. ಪೊನ್ನ, ರನ್ನ, ಜನ್ನ, ನಾಗವರ್ಮ, ನಾಗಚಂದ್ರರವರೆಗೆ ಕನ್ನಡ ಸಾಹಿತ್ಯ ಈ ಒಂದು ನಿರ್ದಿಷ್ಟ ದಿಕ್ಕಿನಲ್ಲಿಯೇ ಹರಿದು ಬಂದಿತು.

**ರನ್ನ**

ಹತ್ತನೇ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟವಾದ ಸ್ಥಾನ ಪಡೆದ ರನ್ನನು ಹೆಸರಾಂತ ಜೈನ ಕವಿಯಾಗಿದ್ದಾನೆ. ರನ್ನನು ಚಾವುಂಡರಾಯನ ಆಶ್ರಯಕ್ಕೆ ಬಂದು ಜಿನಸೇನಾಚಾರ್ಯರ ಬಳಿ ಶಿಷ್ಯವೃತ್ತಿಯನ್ನು ಸ್ವಿಕರಿಸಿ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದನು. ಚಾವುಂಡರಾಯನ ಆಶ್ರಯದಲ್ಲಿದ್ದು ಚಾವುಂಡರಾಯನಿಗೆ ಪುರಾಣ ರಚನೆಯಲ್ಲಿ ಸಹಕಾರವನ್ನು ನೀಡಿದನು. ನಂತರ ಎರಡನೆ ತೈಲಪನ ಆಶ್ರಯದಲ್ಲಿದ್ದನು. 'ಅಜಿತನಾಥ ಪುರಾಣ' ಮತ್ತು 'ಸಾಹಸ ಭೀಮ ವಿಜಯ' ಎಂಬ ಮೇರು ಕೃತಿಗಳನ್ನು ರಚಿಸಿದ್ದಾನೆ. ಅಲ್ಲದೇ ಅಜಿತಪುರಾಣದ ಸಮಾಪ್ತಿಭಾಗದಲ್ಲಿ "ಕರೆಮಸೆದವು ರತ್ನತ್ರಯ ಪರಿಕಲ್ಪದೆ ಪರಶುರಾಮ ಚರಿತಂ ಚಕ್ರೇಶ್ವರ ಚರಿತಮಜಿತ ತೀರ್ಥೇಶ್ವರ ಚರಿತಂ ರತ್ನನಿಂದೆ"[4] ಎಂದು ತನ್ನಿಂದ ಮೂರು ಕೃತಿಗಳು ರಚಿತವಾಗಿರುವವೆಂದು ಹೇಳಿದರೂ ಮೊದಲಿನ ಎರಡು ಕೃತಿಗಳು ಇಲ್ಲಿವರೆಗೂ ಲಭ್ಯವಾಗಿಲ್ಲ. ಆದರೆ ಆತನು ರಚಿಸಿದ ರನ್ನಕಂದ ನಿಘಂಟು ಕೃತಿಯಾಗಿದೆ. 'ಅಜಿತನಾಥ ಪುರಾಣವು' ಎರಡನೆಯ ತೀರ್ಥಂಕರನಾದ ಅಜಿತನಾಥ ತೀರ್ಥಂಕರನ ಜೀವನ ಚರಿತ್ರೆಯಾಗಿದೆ. ಪಂಪನು ಮೊದಲನೆ ತೀರ್ಥಂಕರನನ್ನು ಕುರಿತು ಬರೆದಂತೆ ರನ್ನನು ಎರಡನೇಯ ತೀರ್ಥಂಕರನನ್ನು ಕುರಿತು ಕಾವ್ಯವನ್ನು ಬರೆದಿದ್ದಾನೆ. 12 ಆಶ್ವಾಸವುಳ್ಳ ಈ ಧಾರ್ಮಿಕ ಕಾವ್ಯವನ್ನು ದಂಡನಾಯಕನಾದ ನಾಗವರ್ಮನ ಮಡದಿ ಅತ್ತಿಮಬ್ಬೆಯ ಕೋರಿಕೆಯ ಮೇರೆಗೆ ರಚಿಸಿದೆ ಎಂದು ಹೇಳಿಕೊಂಡಿದ್ದಾನೆ. ಜೈನ ಅನುಯಾಯಿಯಾದ ಅತ್ತಿಮಬ್ಬೆಯು ಕರ್ನಾಟಕದಲ್ಲಿ ಅದರ ಪ್ರಗತಿಗೆ ಅಪಾರ ಕಾಣಿಕೆ ನೀಡಿದ್ದಾಳೆ. ಅತ್ತಿಮಬ್ಬೆಯು 'ಅಜಿತನಾಥ ಪುರಾಣ' ಕೃತಿಯನ್ನು ಸಾವಿರಾರು ಪ್ರತಿ ಮಾಡಿಸಿ ದಾನ ಮಾಡಿ 'ದಾನ ಚಿಂತಾಮಣಿ' ಎಂಬ ಬಿರುದಿಗೆ ಪಾತ್ರಳಾಗಿದ್ದಾಳೆ. ಅಜಿತನಾಥ ಪುರಾಣದ ಮೊದಲ ಆಶ್ವಾಸದಲ್ಲಿ ಒಂದು ಚಿಕ್ಕ ಸಮಕಾಲೀನ ಇತಿಹಾಸದ ಕಥೆಯಿದೆ. "ರನ್ನ ಅದನ್ನೇ ವಿವರವಾಗಿ ಬರೆದಿದ್ದರೂ ಇತಿಹಾಸಕ್ಕೆ ಅಮೂಲ್ಯ ಕಾಣಿಕೆ ಸಲ್ಲುತ್ತಿತ್ತು. ನಾಗಮಯ್ಯನ ಮಕ್ಕಳಾದ ಮಲ್ಲಪ ಪೊನ್ನಮಯ್ಯರ ಗುಣಗಳನ್ನು ವರ್ಣಿಸುತ್ತಾ "ಪಂಡಿತ ಮಂಡಳಿಗಂ

ಕವಿಮಂಡಳಿಗಳಿಗಂ ತನ್ನ ಮನೆ ತವರ್ಮನೆ" ಯಂತೆ ಔದಾರ್ಯ ತೋರಿದರು. "ಆಚಾರದೋಳ್ ಗುಡಿಯಂ ಕಟ್ಟಿ"ದರು ಎಂದು, ಅಲ್ಲದೆ ಅವರು "ಪೊನ್ನಿಗನಿಂಬರೆಯಿಸಿದರ್ ಪುರಾಣ ಚೂಡಾಮಣಿಯಂ"[5] ಎಂದು ತಿಳಿಸುತ್ತಾನೆ. ರನ್ನನು ಅತ್ತಿಮಬ್ಬೆಯ ಗುಣವರ್ಣನೆ ಮಾಡುವ ಅನೇಕ ಪದ್ಯಗಳು ಕಾವ್ಯನಾಯಕನ ವರ್ಣನೆಗಿಂತ ಹೆಚ್ಚು ಸಹಜವೂ ಮತ್ತು ಕಾವ್ಯಮಯವೂ ಆಗಿ ಮೂಡಿ ಬಂದಿವೆ. ಅಜಿತನಾಥನ ಕಥೆ ಎಂಟನೇ ಆಶ್ವಾಸಕ್ಕೆ ಮುಗಿದರೆ ಉಳಿದ ನಾಲ್ಕು ಆಶ್ವಾಸಗಳಲ್ಲಿ ಎರಡನೇ ಚಕ್ರವರ್ತಿಯಾದ ಸಗರ ಚಕ್ರವರ್ತಿಯ ಕಥೆಯಿದೆ. ರನ್ನ ತನ್ನ ಅಜಿತನಾಥಪುರಾಣವನ್ನು ಪುರಾಣತಿಲಕವೆಂದೂ, ತನ್ನನ್ನು ಕವಿಜನ ಚೂಡಾರತ್ನ, ಉಭಯಕವಿ ಅಭಿನವ ಕವಿಚಕ್ರವರ್ತಿ ಎಂದೂ ಕರೆದುಕೊಂಡಿದ್ದಾನೆ.

ಈತನ ಎರಡನೆಯ ಕೃತಿ 'ಸಾಹಸ ಭೀಮ ವಿಜಯ'. ಈ ಕಾವ್ಯದಲ್ಲಿ ಪಂಪನು ಹೇಗೆ ತನ್ನ ಆಶ್ರಯದಾತನಾದ ಅರಿಕೇಸರಿಯ ಪ್ರಾರ್ಥನೆಯೊಂದಿಗೆ ನಾರಾಯಣನನ್ನು ತಗುಲಿಸಿ ಹೇಳಿದಂತೆ, ರನ್ನನು ತನ್ನ ಆಶ್ರಯದಾತನಾದ ಇರಿವಬೇಡಂಗನೊಂದಿಗೆ ಬಲಿದರ್ಪನನ್ನು ಕೂಡಿಸಿ ಪ್ರಾರ್ಥಿಸಿದ್ದಾನೆ. "ಇರಿವಬೆಡಂಗ ತನ್ನ ಪ್ರೀತಿಯ ತಮ್ಮನನ್ನು ಕೊಂದ ಶತ್ರುವನ್ನು ಕೊಲ್ಲದೆ ಸ್ನಾನ ಮಾಡುವುದಿಲ್ಲವೆಂದು ಪ್ರತಿಜ್ಞೆಮಾಡಿ, ಆ ಶತ್ರುವನ್ನು ಕೊಂದಾಗಲೇ ಮಿಂದನಂತೆ. ಭೀಮನ ಪ್ರತಿಜ್ಞೆಯಂತಹ ಪ್ರತಿಜ್ಞೆಯೊಂದನ್ನು ಜೀವನದಲ್ಲಿ ಕಂಡು, ಈ ಇಬ್ಬರನ್ನು ಕೂಡಿಸಿ ಹೇಳುವುದಕ್ಕೆ ಅವಕಾಶವಾಯಿತೆಂದು ರನ್ನ ಸಮರ್ಥಿಸಿಕೊಳ್ಳುತ್ತಾನೆ. ಇದೇ ರೀತಿ ಇರಿವಬೇಡಂಗ ಸತ್ಯಾಶ್ರಯ ಸೋಲಿಸಿದನೆಂದು ಹೇಳಲಾದ ಅಪರಾದಿತ್ಯನಿಗೆ ದುರ್ಯೋಧನ ಸರೋವರವನ್ನು ಹೊಕ್ಕಂತೆ ಸಮುದ್ರವನ್ನು ಹೊಕ್ಕರೂ ಕೊಲ್ಲದೆ ಬಿಡುವುದಿಲ್ಲ ಎಂದು ಸಮೀಕರಿಸುತ್ತಾನೆ."[6] ರನ್ನನು ಅಜಿತನಾಥಪುರಾಣವನ್ನು ಬರೆಯುವಾಗ ಇದ್ದ ಸಂಸ್ಕೃತದ ಭ್ರಮೆ ಗದಾಯುದ್ಧದಲ್ಲಿ ಮಾಯವಾಗಿದೆ. ಮನುಷ್ಯರ ಮನಸ್ಸನ್ನು ಬಿಡಿಸುವುದರ ಕಡೆಗೆ ಹೆಚ್ಚು ಗಮನ ಕೊಡಬೇಕಾಗುವಂಥ ಕಥಾನಕವನ್ನು ಆರಿಸಿಕೊಂಡಿದ್ದರಿಂದ. ಅಲ್ಲದೆ ತನ್ನ ಸುತ್ತಣ ರಾಜಪರಿಸರವನ್ನೇ ಅಳವಡಿಸಲು ನಿಶ್ಚಯಿಸಿದ್ದರಿಂದ, ತಿಳಿಗನ್ನಡ ಸಂಸ್ಕೃತದ ನೆರವಿನೊಂದಿಗೆ ಶಕ್ತಿಯುತವಾಗಿ ವಿಹರಿಸಿದೆ. ಅನಗತ್ಯವಾಗಿ ಸಂಸ್ಕೃತದ ಪ್ರೌಢಿಮೆ ಮೆರೆಸುವುದನ್ನು ಕೈಬಿಟ್ಟ ಕವಿ ಕನ್ನಡದ ಜೊತೆ ಅದನ್ನು ಸಮ್ಮೀಳನಗೊಳಿಸಿ ಕನ್ನಡದಿಂದ ಬೇರೆಯಾಗದಂತೆ ಕಾಯ್ದುಕೊಂಡಿದ್ದಾನೆ. ಪಂಪ ಮತ್ತು ಭಟ್ಟನಾರಾಯಣರ ಋಣಭಾರವಿದ್ದು ಹೊಸತಂತ್ರ ಮತ್ತು ಹೊಳಪಿಕ್ಕಿದ ಮಾತುಗಾರಿಕೆಯಿಂದ ರನ್ನ ಗಮನ ಸೆಳೆಯುತ್ತಾನೆ. ಅಜಿತಪುರಾಣದಲ್ಲಿ ಅಭಿನವ ಚಕ್ರವರ್ತಿಯಾಗಿದ್ದವನು ಇಲ್ಲಿ ಕವಿಚಕ್ರವರ್ತಿಯಾಗಿದ್ದಾನೆ. ರನ್ನನ ಕಾವ್ಯವನ್ನು ನೋಡಿದ ಮೇಲೆ "ವಾಗ್ದೇವಿಯ ಭಂಡಾರದ ಮುದ್ರೆಯನ್ನು ಒಡೆದೆ" ನೆನ್ನುವ ಅವನ ಜಂಬ ಮಿತಿಮೀರಿದೆ ಎನ್ನಿಸಿದರೂ ಗುಣದಿಂದ ಕೂಡಿದ ಕಾವ್ಯ ರಚಿಸಿದ ಸಂತೋಷಕ್ಕೆ ಅವನು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ ಎನ್ನಬಹುದು. ಪಂಪ ಭಾರತದ ಹದಿಮೂರು ಮತ್ತು ಹದಿನಾಲ್ಕನೇ ಆಶ್ವಾಸಗಳನ್ನು ಮತ್ತು ವೇಣಿಸಂಹಾರವನ್ನು ಇಟ್ಟುಕೊಂಡು ಕಾವ್ಯವನ್ನು ರಚಿಸಿದ ರನ್ನನು ಪಂಪನ ನಂತರ ಬಂದ ಕವಿಗಳಲ್ಲಿ ಯಶಸ್ಸು ಪಡೆದ ರನ್ನನೇ ಮೊದಲಿಗನೆಂದು ಹೇಳುವುದರಲ್ಲಿ ತಪ್ಪೇನಿಲ್ಲವೆಂದು ಹೇಳಬಹುದು.

**ಪೊನ್ನ**

ಪಂಪನ ನಂತರ ಬರುವ ಕವಿಗಳಲ್ಲಿ ಪೊನ್ನನೇ ಮೊದಲನೆಯವನು. ಇವನು ರಾಷ್ಟ್ರಕೂಟರಲ್ಲಿ ಪ್ರಖ್ಯಾತನಾದ ಮೂರನೇ ಕೃಷ್ಣನ ಆಸ್ಥಾನದಲ್ಲಿದ್ದನು. "ಪೊನ್ನನು ತಾನು ಅತಿಗಂಭೀರ ಮೃದೂಕ್ತಿಯುಳ್ಳವನೆಂದೂ ಮತ್ತು ಭುವನದ ಕನ್ನಡ, ಸಂಸ್ಕೃತ ಕವಿಗಳ ಸಾಲನ್ನೇ ಸೋಲಿಸಿದ್ದೇನೆಂದೂ ಹೇಳಿಕೊಳ್ಳುತ್ತಾನೆ. ಇದಲ್ಲದೆ ಕನ್ನಡ ಕವಿತೆಯಲ್ಲಿ

ಅಸಗನಿಗೆ ನೂರರಷ್ಟೆಂದೂ ಸಂಸ್ಕೃತದಲ್ಲಿ ಕಾಳಿದಾಸನಿಗೆ ನಾಲ್ಕರಷ್ಟೆಂದೂ ಹೇಳಿಕೊಳ್ಳುತ್ತಾನೆ." ಪೊನ್ನನು ಭುವನೈಕರಾಮಾಭ್ಯುದಯ ಮತ್ತು ಶಾಂತಿಪುರಾಣ ಎಂಬ ಒಂದು ಲೌಕಿಕ ಮತ್ತು ಒಂದು ಆಗಮಿಕ ಕಾವ್ಯವನ್ನು ಬರೆದಿದ್ದಾನೆ. ಪಂಪನು ಭಾರತದ ಕಥೆಯನ್ನು ತೆಗೆದುಕೊಂಡು ಬರೆದಂತೆ ಪೊನ್ನನು ರಾಮಾಯಣದ ಕಥೆಯನ್ನು ಬರೆದಿದ್ದಾನೆ.

ಪಂಪನ ಪೂರ್ವಜರಿಂದ ಆರಂಭವಾದ ಲೌಕಿಕ ಮತ್ತು ಆಗಮಿಕ ಕಾವ್ಯ ಮಾರ್ಗವನ್ನು ಪೊನ್ನನು ಮುಂದುವರೆಸಿ ತನ್ನ ಆಶ್ರಯದಾತನಾದ ಮೂರನೇ ಕೃಷ್ಣನನ್ನು ಕಾವ್ಯನಾಯಕನಲ್ಲಿ ಅಭೇದವನ್ನು ಕಲ್ಪಿಸಿ ಭುವನೈಕರಾಮಾಭ್ಯುದಯವನ್ನು ಬರೆದಿದ್ದಾನೆ. ಭುವನೈಕರಾಮಾಭ್ಯುದಯ ಕಥೆಯು ಹದಿನಾಲ್ಕು ಆಶ್ವಾಸಗಳಿಂದ ಕೂಡಿದ್ದೆಂದು ಪೊನ್ನನೇ ಹೇಳಿರುವುದರಿಂದ ಆಶ್ವಾಸಗಳ ವಿಚಾರದಲ್ಲಿ ಪಂಪನನ್ನು ಅನುಸರಿಸಿದ್ದಾನೆಂದು ಹೇಳಬಹುದು.

ಆಗಮಿಕ ಕಾವ್ಯವಾಗಿ ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನನ್ನು ಕುರಿತು ಕಾವ್ಯ ಬರೆಯುವಾಗ ಪೊನ್ನ ತನ್ನ ಗುರುವಾದ ಜಿನಚಂದ್ರದೇವರನ್ನೆ ಕಥಾನಾಯಕನಿಗೆ ಹೋಲಿಸಿ ಬರೆದಿದ್ದಾನೆ. ಅದೇ ರೀತಿಯಾಗಿ "ಶಾಂತಿಪುರಾಣದ ರಚನೆಗೆ ಕಾರಣರಾದವರು ಮಲ್ಲಪಾರ್ಯ ಮತ್ತು ಮುನ್ನಮಾರ್ಯರು. ವೆಂಗಿಯ ಕಮ್ಮೆನಾಡಿನ ಪುಂಗನೂರಿಗೆ ಸೇರಿದವರು. ನಾಗಪಯ್ಯನ ಮಕ್ಕಳಾದ ಇವರು ಗುರುಜಿನಚಂದ್ರರ ಗೌರವಾರ್ಥವಾಗಿ ಕಾವ್ಯವನ್ನು ಬರೆಸಿದರು. ಇವರು ಉದಾರಿಗಳೂ ದಾನಿಗಳೂ ಆಗಿದ್ದರೆಂದು"[7] ಹೇಳಲಾಗಿದೆ. ಈ ಕಾವ್ಯದ ವಿಶೇಷತೆಯೆಂದರೆ ಪೊನ್ನ ಮಾತ್ರ ಲೌಕಿಕ ಕಾವ್ಯದ ರೀತಿಯಲ್ಲಿ ಶಾಂತಿಪುರಾಣಕ್ಕೂ 'ಕವಿಚಕ್ರವರ್ತಿ ಕೃತಿನಾಯಕ ಜಿನಚಂದ್ರದೇವನು' ಎಂದು ಕಾವ್ಯನಾಯಕ ಶಾಂತಿನಾಥನ ಜೊತೆ ಜಿನಚಂದ್ರನನ್ನು ಸಮೀಕರಿಸಿದ್ದಾನೆ. ಬಹುಶ ಜಿನಚಂದ್ರದೇವನು ಆ ಕಾಲಕ್ಕೆ ಪ್ರಭಾವಶಾಲಿಯಾದ ಜೈನಗುರುವಾಗಿರ ಬೇಕೆಂದು ತಿಳಿದು ಬರುತ್ತದೆ. ಶಾಂತಿನಾಥನ ಕಥೆ ಅವನ ಆರನೇ ಭವದ ಅಪರಾಜಿತನ ವೃತ್ತಾಂತದಿಂದ ಆರಂಭವಾಗುತ್ತದೆ. ತನ್ನ ಹಿಂದಿನ ಭವಗಳಾದ ಅಚ್ಯುತೇಂದ್ರ, ಅಮಿತತೇಜ, ಮಣಿಚೂಳರ ವೃತ್ತಾಂತವನ್ನು ಶಾಂತಿನಾಥನೇ ಹೇಳಿದರೆ, ಮಿಕ್ಕ ಮೂರು ಭವಗಳಾದ ಶ್ರೀಷೇಣ, ಭೋಗಭೂಮಿಜ ಹಾಗೂ ಶ್ರೀದೇವರ ವೃತ್ತಾಂತಗಳನ್ನು ವಿಜಯ ಕೇವಲಿಗಳು ಹೇಳುವರು. ಜಿನಚಂದ್ರನ ಧರ್ಮ ಕೋಟೆಯೊಳಗೆ ಇದ್ದು, ಕವಿಚಕ್ರವರ್ತಿ ಬಿರುದನ್ನು ಹೊತ್ತವನು ಬರೆದದ್ದರಿಂದ ಶಾಂತಿಪುರಾಣ ಪುರಾಣ ಚೂಡಾಮಣಿಯಾಯಿತೇ ಹೊರತು ಸಾಹಿತ್ಯಿಕ ಮಹತ್ವದಿಂದ ಅಲ್ಲ ಎನ್ನುವುದು ಕಾವ್ಯವನ್ನು ಓದುವುದರಿಂದ ಸ್ಪಷ್ಟವಾಗುತ್ತದೆ.

**ಎರಡನೆಯ ನಾಗವರ್ಮ**

ಎರಡನೆಯ ನಾಗವರ್ಮನು ಚಾವುಂಡರಾಯ ಮತ್ತು ದುರ್ಗಸಿಂಹನ ಸಮಕಾಲೀನನವನು. ಈತನು ಕ್ರಿ.ಶ 1015 ರಿಂದ 1042 ರವರೆಗೆ ಆಳಿದ ಚಾಲುಕ್ಯ ಜಯಸಿಂಹ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯ ನಾಗಿದ್ದನು. ಇವನು ತನ್ನ ತಂದೆ ವಿಪ್ರಕುಲ ದೀಪಕನಾದ ದಾಮೋಧರ, ತಾಯಿ ವೀರಕಬ್ಬೆ ಮತ್ತು ಗುರು ಶ್ರೀವೀರಭಟ್ಟಾರಕನೆಂದು ಹೇಳಿಕೊಂಡಿದ್ದಾನೆ. ಇವನು ರಚಿಸಿದ ಕೃತಿಗಳು ಛಂದೋವಿಚಿತಿ, ಅಭಿದಾನ ವಸ್ತುಕೋಶ, ಕರ್ಣಾಟಕ ಭಾಷಾಭೂಷಣ, ಕಾವ್ಯಾವಲೋಕನ ಮತ್ತು ವರ್ಧಮಾನ ಪುರಾಣ, ಅವನ ಛಂದೋವಿಚಿತಿ ಕೃತಿಯು ಅನುಪಲಬ್ಧವಾಗಿದೆ.

ನಾಗವರ್ಮ ಪಂಡಿತನು ಮತ್ತು ಶಾಸ್ತ್ರಕಾರನಾಗಿದ್ದರೂ, ಕವಿಯಾಗಿ ಇಪ್ಪತ್ತನಾಲ್ಕನೇ ತೀರ್ಥಂಕರನಾದ ವರ್ಧಮಾನನನ್ನು ಕುರಿತು **'ವರ್ಧಮಾನ ಪುರಾಣ'**ವನ್ನು ರಚಿಸಿದ್ದಾನೆ. ಆತನು ರಾಜನ ಮನ್ನಣೆಗೆ ಪಾತ್ರನಾಗಿದ್ದರೂ ಇದು ಜೈನಪುರಾಣವಾದ್ದರಿಂದ ಇಲ್ಲಿ ರಾಜನ ಪಾತ್ರವಿಲ್ಲ. ವರ್ಧಮಾನಪುರಾಣದಲ್ಲಿ ಮೊದಲಿಗೆ ಮಹಾವೀರನನ್ನು ಪ್ರಾರ್ಥಿಸಿ ನಂತರ ಇತರ

ಪುರಾಣಕಾರರಂತೆ ಮುನಿಗಳು, ಆಚಾರ್ಯರನ್ನು ಸ್ತುತಿಸುವುದಿಲ್ಲ. ಬದಲಿಗೆ ಪೂರ್ವ ಕವಿಗಳಾದ ಶ್ರೀವಿಜಯ, ಗುಣವರ್ಮ, ಪೊನ್ನ, ಪಂಪ, ರನ್ನರನ್ನು ಸ್ತುತಿಸುತ್ತಾನೆ. ಇದನ್ನು ನೋಡಿದರೆ ಜೈನವಲಯಗಳಲ್ಲಿ ಕವಿಗಳು ತಮ್ಮ ಆಶ್ರಯದಾತರನ್ನು ಹೋಲಿಸಿ ಹೇಳಿದ ಕೃತಿಗಳ ಬಗ್ಗೆ ಆ ಕಾಲಕ್ಕೆ ಒಳ್ಳೆಯ ಭಾವನೆ ಇರಲಿಲ್ಲವೆಂದು ತಿಳಿದುಬರುತ್ತದೆ. ನಾಗವರ್ಮ ಹೆಸರಿಸದೇ ಇದ್ದರೂ ಅಸಗ ಸಂಸ್ಕೃತದಲ್ಲಿ ಬರೆದ ವರ್ಧಮಾನ ಪುರಾಣವೂ ಗುಣವರ್ಮನ ಉತ್ತರ ಪುರಾಣವೂ ಈ ಕೃತಿಯ ರಚನೆಯಲ್ಲಿ ನೆರವಾಗಿರುವುದನ್ನು ಕಾಣಬಹುದು.

**ಶಾಂತಿನಾಥ**

ಶಾಂತಿನಾಥನು ಬನವಾಸಿ ಪನ್ನಿರ್ಚಾಸಿರವನ್ನು ಆಳುತ್ತಿದ್ದ ಗಂಗವಂಶದ ಲಕ್ಷ್ಮಣ ಸಾಮಂತನಿಗೆ ಅರ್ಥಾಧಿಕಾರಿ ಮತ್ತು ಮಂತ್ರಿಯಾಗಿದ್ದನು. ಎರಡನೆ ನಾಗವರ್ಮ ಇಪ್ಪತ್ತನಾಲ್ಕನೆಯ ತೀರ್ಥಂಕರನನ್ನು ಕುರಿತು ಬರೆದ ನಂತರ ತೀರ್ಥಂಕರರ ಪುರಾಣ ರಚನೆ ಮುಗಿದಿರಬೇಕು ಅಥವಾ ತೀರ್ಥಂಕರರಿಗೆ ಭಿನ್ನವಾದ ಕಥಾವಸ್ತು ತನ್ನ ಸಮಕಾಲೀನ ಸಮಾಜಕ್ಕೆ ಅಗತ್ಯವೆಂದು ಭಾವಿಸಿ ಶಾಂತಿನಾಥನು **ಸುಕುಮಾರಸ್ವಾಮಿಯ** ಕಥೆಯನ್ನು ತೆಗೆದುಕೊಂಡು ಸುಕುಮಾರ ಚರಿತೆಯನ್ನು ಬರೆದಿದ್ದಾನೆ.

ಶಾಂತಿನಾಥನು ಸುಕುಮಾರ ಚರಿತವನ್ನು ಬರೆಯುವಾಗ ಜೈನಾಚಾರ್ಯರನ್ನು ಸ್ತುತಿಸಿರುವುದು ಧಾರ್ಮಿಕ ಕೃತಿಯನ್ನು ಬರೆಯುತ್ತಿರುವುದರಿಂದ ಅಂದುಕೊಂಡರೂ, ಬಿದ್ದುಹೋಗುತ್ತಿದ್ದ ತನ್ನ ಧರ್ಮದ ಮಹಿಮೆಯನ್ನು ಈ ಮೂಲಕ ಮೆರೆಸಿ ಸಮಾಧಾನ ತಂದುಕೊಳ್ಳಲು ಅವನು ಹಾಗೆ ಮಾಡಿರಬಹುದು.

ಬ್ರಾಹ್ಮಣನೊಬ್ಬ ಜೈನನನ್ನು ಮೋಸಪಡಿಸಲು ಹೋಗಿ ತಾನೇ ಜೈನಾಚಾರ್ಯನಾಗುವುದು, ಅವನನ್ನು ನಿಂದಿಸಿದ ಬ್ರಾಹ್ಮಣನೊಬ್ಬ ಹೀನಜಾತಿಗಳಲ್ಲಿ ಹುಟ್ಟಿ ಕೊನೆಗೆ ಜೈನಧರ್ಮದಿಂದಲೇ ಅಹಮಿಂದ್ರ ಪಟ್ಟಕ್ಕೇರುವುದು ಕಂಡುಬರುವುದು. ಬ್ರಾಹ್ಮಣರು ತಾವು ನಂಬಿದ ತತ್ವ ಮಿಥ್ಯವಾದದ್ದೆಂದು ಹೇಳುವುದಕ್ಕಾಗಿ ಮತ್ತು ತನ್ನ ಕಾಲದ ಬ್ರಾಹ್ಮಣ ಪ್ರಾಬಲ್ಯದ ಪರಿಸ್ಥಿತಿಗೆ ವಿರೋಧ ವ್ಯಕ್ತಪಡಿಸುವುದಕ್ಕಾಗಿ ಅವನು ಈ ಕಾವ್ಯವನ್ನು ಬಳಸಿಕೊಂಡಿದ್ದಾನೆ ಎಂದು ಕಂಡುಬರುವುದು. ಹೀಗೆ ಜೈನ ಧರ್ಮದ ಪ್ರಾಮುಖ್ಯತೆಯನ್ನು ತನ್ನ ಕಾವ್ಯದ ಮೂಲಕ ಸಾರುವ ಕೆಲಸವನ್ನು ಮಾಡಿದ್ದಾನೆ.

**ನಾಗಚಂದ್ರ**

ಅಭಿನವ ಪಂಪನೆಂದು ತನ್ನನ್ನು ತಾನೆ ಕರೆದುಕೋಡಿರುವ ಕವಿ ನಾಗಚಂದ್ರನು ಲೌಕಿಕ ಮತ್ತು ಆಗಮಿಕ ಕಾವ್ಯಗಳ ಸಂಪ್ರದಾಯವನ್ನು ಕೈಬಿಟ್ಟು ಮಲ್ಲಿನಾಥ ಪುರಾಣ ಮತ್ತು ರಾಮಚಂದ್ರಚರಿತ ಪುರಾಣಗಳನ್ನು ಬರೆದು ತನ್ನ ಧಾರ್ಮಿಕ ನಿಷ್ಠೆಯನ್ನು ಪ್ರಕಟಿಸಿದ್ದಾನೆ. ಇವನು ರಾಜನ ಆಸ್ಥಾನದಲ್ಲಿ ಇಲ್ಲದಿದ್ದುದರ ಕಾರಣದಿಂದ ಲೌಕಿಕ–ಆಗಮಿಕ ಕಾವ್ಯ ಮಾರ್ಗವನ್ನು ಬಿಟ್ಟು ಎರಡೂ ಜೈನ ಪುರಾಣಗಳನ್ನು ಬರೆದಿದ್ದಾನೆ.

**ಮಲ್ಲಿನಾಥ ಪುರಾಣ:** ಮಲ್ಲಿನಾಥ ಪುರಾಣವು ಕವಿ ನಾಗಚಂದ್ರನ ಮೊದಲ ಮಹಾಕಾವ್ಯವಾಗಿದೆ. ಈ ಕಾವ್ಯವು ಜೈನ ಧರ್ಮದ ಹತ್ತೊಂಭತ್ತನೆಯ ತೀರ್ಥಂಕರನಾದ ಮಲ್ಲಿನಾಥರ ಜೀವನ ಮತ್ತು ಚರಿತ್ರೆಯನ್ನು ತಿಳಿಸುತ್ತದೆ. ಮಲ್ಲಿನಾಥನ ಕಥೆಯನ್ನು ಕಾವ್ಯದಲ್ಲಿ ಪ್ರಥಮ ಬಾರಿಗೆ ತಾನೇ ಹೇಳುತ್ತಿರುವುದಾಗಿ ತಿಳಿಸುತ್ತಾನೆ. ಬೇರೆಯವರು ಹೇಳದಿರುವುದಕ್ಕೆ ಕಾರಣ ಕಥೆ ಚಿಕ್ಕದು ಎಂದು ಅವನೇ ಹೇಳಿದ್ದಾನೆ. ಹಿಂದಿನ ಕವಿಗಳಲ್ಲಿ ಯಾರೂ ಈ ವಸ್ತುವನ್ನು ತೆಗೆದುಕೊಳ್ಳದಿದ್ದರೂ ಗುಣಭದ್ರನ ಉತ್ತರಪುರಾಣದಲ್ಲಿರುವ ಕಥಾವಸ್ತುವೇ ಇದಕ್ಕೆ ಮೂಲಸಾಮಗ್ರಿಯನ್ನೊದಗಿಸಿದೆ.

ನಾಗಚಂದ್ರನು ಮಲ್ಲಿನಾಥ ಪುರಾಣವನ್ನು ಸಿದ್ದರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು

ಮತ್ತು ರತ್ನತ್ರಯರೊಂದಿಗೆ ಆರಂಭಿಸಿ, ನಂತರ ಸರಸ್ವತಿಯ ವರ್ಣನೆಯನ್ನು ಮಾಡುತ್ತಾನೆ. ನಂತರ ರಾಜ್ಯ, ಪುರ, ಉದ್ಯಾನಗಳ ವರ್ಣನೆ ಮತ್ತು ಮಲ್ಲಿನಾಥನ ಜೀವನದ ಚರಿತ್ರೆಯನ್ನು ಸುಂದರವಾಗಿ ಕಟ್ಟಿಕೊಟ್ಟಿದ್ದಾನೆ.

**ರಾಮಚಂದ್ರಚರಿತ ಪುರಾಣ** : ನಾಗಚಂದ್ರನು ಪಂಪನಂತೆ ರಾಮಾಯಣದ ಕಥಾವಸ್ತುವನ್ನು ತನ್ನ ಎರಡನೆಯ ಕಾವ್ಯಕ್ಕೆ ತೆಗೆದುಕೊಂಡಿದ್ದಾನೆ. ಪಂಪನು ಮಹಾಭಾರತದ ಕಥೆ ತೆಗೆದುಕೊಂಡು ಅದಕ್ಕೆ ಜೈನ ಧೀಕ್ಷೆ ಕೊಡದೆ ಅದಕ್ಕೆ ರಾಜಧೀಕ್ಷೆಯನ್ನು ಕೊಟ್ಟು ಅದಕ್ಕನುಗುಣವಾಗಿ ಕಥೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡರೂ ಮೂಲ ಮಹಾಭಾರತದ ಆಶಯವನ್ನು ಮೀರಿಹೋಗಿಲ್ಲ. ಆದರೆ ನಾಗಚಂದ್ರನು ರಾಮಾಯಣ ಕಥೆಗೆ ಜೈನ ಧೀಕ್ಷೆ ನೀಡುವುದರ ಮೂಲಕ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. “ಪಿರಿದೆನೆಸಿರ್ದ ರಾಮಕಥೆಯಂ ಕಿರಿದಾಗಿರೆ” ಹೇಳಿದ್ದೇನೆಂದು ತನ್ನ ಕಾವ್ಯದ ಬಗ್ಗೆ ನಾಗಚಂದ್ರನು ಹೇಳಿಕೊಂಡಿದ್ದಾನೆ. ಇದು ಅವನು ಕಾವ್ಯವನ್ನು ಗ್ರಹಿಸಿದ ಮನೋಧರ್ಮಕ್ಕೆ ಹಿಡಿದ ಕೈಗನ್ನಡಿಯಂತಿದೆ.

ನಾಗಚಂದ್ರನಿಗಿಂತ ಹಿಂದೆ ಇದ್ದ ಶ್ರೀವಿಜಯ ಬರೆದ ರಘುವಂಶ ಪುರಾಣ ಕಾವ್ಯವು ಸಿಕ್ಕದೇ ಇರುವುದರಿಂದ ಸದ್ಯಕ್ಕೆ ಮಹಾಭಾರತವನ್ನು ಕನ್ನಡಕ್ಕೆ ತಂದ ಪಂಪನಂತೆ, ರಾಮಾಯಣವನ್ನು ಕನ್ನಡಕ್ಕೆ ಮೊದಲು ತಂದ ಕವಿ ನಾಗಚಂದ್ರನೆಂದು ಉಳಿದಿದೆ. ಆದರೆ ನಾಗಚಂದ್ರನು ಕಥೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ.

“ರಾಮಾಯಣದಲ್ಲಿ ಅರಣ್ಯವಾಸಕ್ಕೆ ಹೊರಡುವುದಕ್ಕೆ ಮೊದಲೇ ಲಕ್ಷ್ಮಣನಿಗೆ ಊರ್ಮಿಳೆಯೊಂದಿಗೆ ಮದುವೆಯಾಗಿದ್ದರೆ, ಇಲ್ಲಿ ಅರಣ್ಯವಾಸಕ್ಕೆ ಹೊರಟ ಲಕ್ಷ್ಮಣನಿಗೆ ಹೆಜ್ಜೆಗೊಂದರಂತೆ ಮದುವೆಯಾಗುತ್ತದೆ. ರಾಮಾಯಣದಲ್ಲಿ ಶಂಭೂಕನನ್ನು ರಾಮ ವಧಿಸುತ್ತಾನೆ. ಆದರೆ ಇಲ್ಲಿ ಅವನನ್ನು ಚಂದ್ರನಖಿಯ ಮಗನನ್ನಾಗಿ ಮಾಡಲಾಗಿದೆಯಲ್ಲದೆ ಬಿದಿರುಮೆಳೆ ಯೊಳಗೆ ತಪಸ್ಸು ಮಾಡುತ್ತಿದ್ದ ಅವನನ್ನು ಲಕ್ಷ್ಮಣ ನೋಡದೆ ಕೊಂದನೆನ್ನಲಾಗಿದೆ. ಶೂದ್ರರಿಗೆ ತಪಸ್ಸು ಮಾಡುವ ಹಕ್ಕಿಲ್ಲವೆಂಬ ವೈದಿಕ ನಿಲುಮೆಯ ಪ್ರತಿಪಾದನೆಗೆ ರಾಮಾಯಣದಲ್ಲಿ ರಾಮನನ್ನು ಬಳಸಿಕೊಂಡಿದ್ದರೆ, ಇಲ್ಲಿ ಆ ಸಂಗತಿಯನ್ನು ಕೈಬಿಡಲಾಗಿದೆ.”[8]

“ರಾವಣ ವ್ಯಕ್ತಿತ್ವದಲ್ಲಿ ಉನ್ನತೋನ್ನತ ಪದವಿಗೇರಿದ್ದನೆಂದು ಕಲ್ಪಿಸಿ, ಅವನು ಒಂದು ಅಣುವ್ರತವನ್ನು ಮೀರಿದ್ದರಿಂದ ಅಂತಹ ಮಹಾಮಹಿಮನೂ ಹೇಗೆ ಅಧೋಗತಿಯನ್ನು ಹೊಂದಿದನೆಂಬ ಸೂತ್ರಕ್ಕೆ ಇಲ್ಲಿ ಅವನ ವ್ಯಕ್ತಿತ್ವವನ್ನು ಬಂದಿಸಲಾಗಿದೆ. “ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೆ” ಎಂದು ನಾಗಚಂದ್ರ ಸಮರ್ಥನೆಯನ್ನು ಒದಗಿಸುತ್ತಾನೆ. ವಾಲ್ಮೀಕಿ ರಾಮಾಯಣದಲ್ಲಿ ಗಂಡನನ್ನು ಕಳೆದುಕೊಂಡು ಕಿವಿಮೂಗುಗಳನ್ನು ಕಳೆದುಕೊಂಡ ತಂಗಿಗೆ ಆದ ಅವಮಾನದ ಸೇಡನ್ನು ತೀರಿಸಿಕೊಳ್ಳಲು ಹೋದ ರಾವಣ ಜಾನಕಿಯಿಂದ ಮೋಹಿತನಾಗಿ ಅವಳನ್ನು ಎತ್ತಿಕೊಂಡು ಹೋಗುತ್ತಾನೆ. ಇದು ಯಾವುದೇ ಶತ್ರು ರಾಜರು ಮಾಡುತಿದ್ದ ಕೆಲಸವೇ. ಸೀತೆಯ ಅಪಹರಣವನ್ನು ಕೈಬಿಟ್ಟಿಲ್ಲವಾದರೂ ರಾವಣನ ವ್ಯಕ್ತಿತ್ವಕ್ಕೆ ಬೇರೊಂದು ಬಣ್ಣ ಕೊಡುವ ಪ್ರಯತ್ನ ಮಾಡಲಾಗಿದೆ”[9]

ಕಾವ್ಯದ ಕೊನೆಯಲ್ಲಿ ಕಥೆ ರಾಮ ಲಕ್ಷ್ಮಣ ಮತ್ತು ರಾವಣರ ಪೂರ್ವಭವಗಳನ್ನು ಹೇಳಿಕೊಂಡು ಮುಂದುವರಿಯುತ್ತದೆ. ರಾಮ ತಮ್ಮನಿರುವವರೆಗೂ ದೀಕ್ಷೆ ತೆಗೆದುಕೊಳ್ಳವುದಿಲ್ಲವೆಂದು ಭಾವಿಸಿದ ದೇವರುಗಳು ಲಕ್ಷ್ಮಣನ ಕಿವಿಗೆ ಬೀಳುವಂತೆ ಮಾಡಿ ರಾಮ ಸತ್ತನೆನ್ನುತ್ತಾರೆ. ಅದನ್ನು ಕೇಳಿದ ಲಕ್ಷ್ಮಣನು ಕ್ಷಣದಲ್ಲಿ ಜೀವ ಬಿಡುತ್ತಾನೆ. ಇಲ್ಲಿ ಅನೇಕ ಜನಪದ ಕಥೆಗಳ ತಂತ್ರವನ್ನು ತರಲಾಗಿದೆ. ಕೊನೆಗೆ ತಮ್ಮನ ಅಗಲುವಿಕೆಯಲ್ಲಿ ರಾಮ ಭಟ್ಟಾರಕನಾಗಿ ಪರಮ ಪದ

ಪ್ರಾಪ್ತಿಯನ್ನು ಪಡೆಯುವುದರಿಂದ ರಾಮನ ಕಥೆ ಮುಗಿಯುತ್ತದೆ.

**ಜನ್ನ**

ಮಹಾಕವಿ ಜನ್ನನು ಹಳಗನ್ನಡದ ಅಗ್ರಗಣ್ಯ ಕವಿಗಳಲ್ಲಿ ಒಬ್ಬನಾಗಿದ್ದಾನೆ. 13ನೇ ಶತಮಾನದ ಪೂರ್ವಾರ್ಧದಲ್ಲಿ ಬದುಕಿ ಬಾಳಿದ ಮಹಾಕವಿಯಾಗಿದ್ದಾನೆ. ಈತನು ಕರ್ನಾಟಕವನ್ನಾಳಿದ ಹೊಯ್ಸಳ ಚಕ್ರವರ್ತಿಗಳಲ್ಲಿ ಸುಪ್ರಸಿದ್ಧನಾದ ವೀರಬಲ್ಲಾಳನ ಆಸ್ಥಾನದ ಕವಿಯಾಗಿದ್ದನು. ಈತನು ಕವಿ ಹಾಗೂ ಕಲಿಯಾಗಿದ್ದ. "ನಿಂದಿರೆ ದಂಡಾಧೀಶಂ ಕುಳ್ಳಿರೆ ಮಂತ್ರಿ ತೊಡಂಕೆ ಕವಿ" ಎಂದು ಸ್ವತಃ ತನ್ನ ಬಗ್ಗೆ ತಾನೇ ಈ ರೀತಿ ಹೇಳಿಕೊಂಡಿದ್ದಾನೆ. ಮನೆಯ ಸಾಹಿತ್ಯಿಕ ಪರಿಸರದಲ್ಲಿ ಬೆಳೆದ ಜನ್ನನು ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣ ಎಂಬ ಲೌಕಿಕ ಮತ್ತು ಆಗಮಿಕ ಮಹಾ ಕಾವ್ಯಗಳನ್ನು ರಚಿಸಿದ್ದಾನೆ.

**ಯಶೋಧರ ಚರಿತ್ರೆ:** ಯಶೋಧರ ಚರಿತ್ರೆಯು ಕವಿ ಜನ್ನನ ಲೌಕಿಕ ಮಹಾಕಾವ್ಯವಾಗಿದೆ. ಆದರೂ ಇದೂ ಜೈನ ಪರವಾದ ಕಾವ್ಯವಾಗಿದೆ. ಇದು 310 ಪದ್ಯಗಳನ್ನು ನಾಲ್ಕು ಅವತಾರಗಳಲ್ಲಿ ಹಂಚಿಕೊಂಡ ಸಣ್ಣ ಗಾತ್ರದ ಕಾವ್ಯವಾಗಿದೆ. ಈ ಕಾವ್ಯದ ನಾಯಕ ಯಶೋಧರ ಮಹಾರಾಜನು ಹೆಂಡತಿ ಅಮೃತಮತಿಯ ಹೇಸಿ ಜೀವನಕ್ಕೆ, ಅವಳ ವಿಕೃತ ಕಾಮ ಪಿಪಾಸೆಗೆ ಹೇಸಿ, ಲೌಕಿಕ ಜೀವನವನ್ನು ತ್ಯಜಿಸಿ ಜೈನ ಯತಿಯಾದ ಸಂದರ್ಭವನ್ನು ಈ ಮಹಾಕಾವ್ಯ ರಮ್ಯವಾಗಿ ಚಿತ್ರಿಸಿದೆ. ಜೈನ ಧರ್ಮದ ಜೀವಾಳವಾದ ಜೀವದಯೆಯನ್ನು ಎತ್ತಿ ಹಿಡಿದ ಕನ್ನಡದ ಶ್ರೇಷ್ಠ ಕಾವ್ಯವಾಗಿದೆ. ಹಿಂಸೆಯ ಘೋರ ಪರಿಣಾಮವನ್ನು ಕರ್ಮತತ್ವದ ಹಿನ್ನಲೆಯಲ್ಲಿ ತಿಳಿಸಿ, ಅಹಿಂಸೆಯ ಮಹಾತತ್ವವನ್ನು ಎತ್ತಿ ಹಿಡಿಯುವುದು ಕವಿಯ ತತ್ವವಾಗಿದೆ.

ಜನ್ನ ತನ್ನ 'ಯಶೋಧರ ಚರಿತೆ' ಯ ಕಥೆಯ ಮೂಲಕ ಮಾನವ ಜನಾಂಗಕ್ಕೆ ದಿವ್ಯ ಸಂದೇಶವನ್ನು ನೀಡಿದ್ದಾನೆ. "ಮನಸಿಜನ ಮಾಯೆ ವಿಧಿ ವಿಳಸನದ ನೆರೆಂಬಡೆಯೆ ಕೊಂದು ಕೂಗದೇ ನರರಂ" ಮನ್ಮಥನ ಮಾಯೆಗೆ ದುರ್ವಿಧಿಯ ನೆರವೂ ಸಿಕ್ಕಾಗ ಅದು ಮನುಷ್ಯನನ್ನು ಕೊಂದು ಕೂಗುತ್ತದೆ–"[10] ಎಂದು ಕಾಮದ ಕೇಡನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಮೂಲಕ ಕಥೆಗೆ ಕವಿ ತನ್ನದೇ ಆದ ಬಣ್ಣವನ್ನು ತುಂಬಿದ್ದಾನೆ. ಆತನ ಶೈಲಿಯಲ್ಲಿ ಸರಳತೆ ಮತ್ತು ಲಾಲಿತ್ಯಗಳಿವೆ. ಪಾತ್ರಗಳು ಜೀವಪೂರ್ಣವಾಗಿವೆ. ಅದರಲ್ಲಿಯೂ ಅಮೃತಮತಿಯ ಪಾತ್ರದಲ್ಲಿ ಆತನು ಅತ್ಯಂತ ಕುಶಲ ಕಲೆಗಾರನಾಗಿದ್ದಾನೆ.

**ಅನಂತನಾಥ ಪುರಾಣ:** ಇದು ಜನ್ನನ ಎರಡನೆಯ ಮಹಾಕಾವ್ಯವಾಗಿದೆ. ಜನ್ನನ ಯಶೋಧರ ಚರಿತೆಯು ಲೌಕಿಕ ಕಾವ್ಯವಾದರೆ, ಅನಂತನಾಥ ಪುರಾಣವು ಜೈನ ಧಾರ್ಮಿಕ ಮಹಾಕಾವ್ಯವಾಗಿದೆ. ಅನಂತನಾಥ ಪುರಾಣವು 14ನೆಯ ಜೈನ ತೀರ್ಥಂಕರನಾದ ಅನಂತನಾಥನ ಕತೆಯನ್ನು ಒಳಗೊಂಡಿದೆ. ಈ ಕಾವ್ಯವು ಸುಮಾರು 1400 ಪದ್ಯಗಳನ್ನು ಒಳಗೊಂಡ 14 ಆಶ್ವಾಸಗಳ ಪ್ರೌಢ ಚಂಪೂ ಮಹಾಕಾವ್ಯವಾಗಿದೆ. ಸಂಸ್ಕೃತದ ಉತ್ತರ ಪುರಾಣ ಹಾಗೂ ಚಾವುಂಡರಾಯನ ಚಾವುಂಡರಾಯ ಪುರಾಣ ಇವು ಜನ್ನನ ಅನಂತನಾಥ ಪುರಾಣಕ್ಕೆ ಆಕರ ಕೃತಿಗಳಾಗಿವೆ. ಈ ಕಾವ್ಯದಲ್ಲಿ ಅನಂತನ ಜನನ, ಪಂಚಕಲ್ಯಾಣಗಳು ಭವ್ಯವಾಗಿದ್ದರೂ, ಸಾಂಪ್ರದಾಯಿಕ ವಿವರಣೆಯಿಂದ ಕಾವ್ಯದ ಆಸಕ್ತಿ ಕುಗ್ಗಿದೆ. ಆದರೆ ಕಾವ್ಯದಲ್ಲಿ ಸಂದರ್ಭವಶವಾಗಿ ಬಂದ 'ಚಂಡಶಾಸನನ ದುರಂತ ಕಥೆ' ಅನಂತನಾಥ ಪುರಾಣದ ಮಹಾರಣ್ಯದಲ್ಲಿ ಇದೊಂದು ಚೆಲುವಿನ ಕೊಳ್ಳವಾಗಿದೆ. ಗೆಳೆಯನಾದ ವಸುಷೇಣನ ಚೆಲುವೆಯಾದ ಹೆಂಡತಿ ಸುನಂದೆಯನ್ನು ಅವನಲ್ಲಿ ಅತಿಥಿಯಾಗಿ ಹೋದಾಗ ಮೋಹಿಸಿ ಅವಳನ್ನು ಚಂಡಶಾಸನ ಮೋಸದಿಂದ ಕರೆದೊಯ್ಯುತ್ತಾನೆ. ತರತರವಾಗಿ ಅವಳನ್ನು ಒಲಿಸಿಕೊಳ್ಳಲು ಹವಣಿಸುತ್ತ ವಸುಷೇಣನ ತರಿದ ತಲೆಯನ್ನೂ ಮೋಡಿಕಾರನಿಂದ ದೊರಕಿಸಿಕೊಂಡು

ತೋರಿಸುತ್ತಾನೆ. ಅದನ್ನು ನೋಡಿ ಅವಳು ಸಾಯುತ್ತಾಳೆ. ಅವಳನ್ನಪ್ಪಿ ಅವನೂ ಸಾಯುತ್ತಾನೆ. ಅವನೊಡನೆ ಕಾಳಗಕ್ಕೆ ಬಂದ ವಸುಷೇಣ ಇದನ್ನರಿತು ಪ್ರಪಂಚಕ್ಕೆ ಹೇಸಿ ತಪಸ್ಸಿಗೆ ಹೊರಡುತ್ತಾನೆ. ಈ ಕಥಾ ಭಾಗದಲ್ಲಿ ಜನ್ನ ತನ್ನ ಉನ್ನತ ಶಕ್ತಿಯನ್ನು ತೋರಿದ್ದಾನೆ. ಸನ್ನಿವೇಶ ನಿರ್ಮಾಣ, ಪಾತ್ರ ವಿಕಾಸ ದುರಂತ ದರ್ಶನಗಳಲ್ಲಿ ಪ್ರಣಯ ಸಮಸ್ಯೆಯ ಪುರುಷ ಮುಖವನ್ನು ತೋರಿಸುವ ಉಜ್ವಲ ಕೃತಿಯಾಗಿ ಇದು ಪರಿಣಮಿಸಿದೆ.

ಹೀಗೆ ಮಹಾಕವಿಗಳು ಮಹಾಕಾವ್ಯಗಳನ್ನು ರಚಿಸುವುದರ ಜೊತೆಗೆ ಇನ್ನೂ ಅನೇಕ ಜೈನಕವಿಗಳು ಸಾಹಿತ್ಯವನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಬ್ರಹ್ಮಶಿವನ ಸಮಯಪರೀಕ್ಷೆ, ನಯಸೇನನ ಧರ್ಮಾಮೃತ, ಕರ್ಣಪಾರ್ಯನ ನೇಮಿನಾಥಪುರಾಣ, ನೇಮಿಚಂದ್ರನ ನೇಮಿನಾಥಪುರಾಣ ಮತ್ತು ಲೀಲಾವತಿ ಪ್ರಬಂಧ, ಅಗ್ಗಳನ ಚಂದ್ರಪ್ರಭಪುರಾಣ, ಆಚಣ್ಣನ ವರ್ಧಮಾನಪುರಾಣ, ಬಂಧುವರ್ಮನ ಜೀವಸಂಬೋಧನೆ, ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣ, 2ನೇ ಗುಣವರ್ಮನ ಪಷ್ಪದಂತ ಪುರಾಣ, ಅಂಡಯ್ಯನ ಕಬ್ಬಿಗರ ಕಾವಂ, ಕಮಲಭವನ ಶಾಂತೀಶ್ವರ ಪುರಾಣ, ಮಹಾಬಲಕವಿಯ ನೇಮಿನಾಥಪುರಾಣ, ನಾಗರಾಜನ ಪುಣ್ಯಾಸ್ರವ, ಬಾಹುಬಲಿಪಂಡಿತನ ಧರ್ಮನಾಥ ಪುರಾಣ, ಮಧುರಕವಿಯ ಧರ್ಮನಾಥಪುರಾಣ, ಆಯತವರ್ಮನ ಕನ್ನಡ ರತ್ನರಂಡಕ, ಕವಿಮಲ್ಲನ ಮನ್ಮಥ ವಿಜಯ ಹೀಗೆ ಹಳಗನ್ನಡ, ನಡುಗನ್ನಡ ಕಾಲದಲ್ಲಿ ಮಾತ್ರವಲ್ಲದೆ ಹೊಸಗನ್ನಡ ಕಾಲ ಸಂದರ್ಭದಲ್ಲೂ ಅನೇಕ ಸಾಹಿತಿಗಳು ಸಾಹಿತ್ಯವನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯವನ್ನು ಅಭಿವೃದ್ಧಿ ಪಥದತ್ತ ತೆಗೆದುಕೊಂಡು ಹೋಗುವ ಕೆಲಸವನ್ನು ಮಾಡಿದ್ದಾರೆ.

ಒಟ್ಟಿನಲ್ಲಿ ಹೀಗೆ ಜೈನ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಪ್ರಾರಂಭದಿಂದ ಮೊದಲುಗೊಂಡು 19ನೇ ಶತಮಾನದವರೆಗೆ ಲೌಕಿಕ ಕಾವ್ಯ, ಧಾರ್ಮಿಕ ಕಾವ್ಯ, ಶಾಸ್ತ್ರ ಕಾವ್ಯ, ವ್ಯಾಕರಣ ಕೃತಿಗಳು ರಚನೆಯಾಗಿ ಅವ್ಯಾಹತವಾಗಿ ಹರಿದು ಬಂದಿದೆ. ಮುಂದೆ 20ನೇ ಶತಮಾನದ ಹೊಸಗನ್ನಡದಲ್ಲಿ ಆಧ್ಯಾತ್ಮಿಕತೆಗೆ ಒತ್ತು ನೀಡಿದರೂ ಉಳಿದೆಲ್ಲ ಸಾಹಿತ್ಯ ಪ್ರಕಾರ ಅದರಿಂದ ದೂರ ಸರಿದು, ಮನುಷ್ಯನ ಜೀವನದ ಸಮಸ್ಯೆಗಳನ್ನು ಇಟ್ಟುಕೊಂಡು ಸಾಹಿತ್ಯ ರಚನೆಗೆ ತೊಡಗಿತು. ಪ್ರಾಚೀನ ಸಾಹಿತ್ಯವಂತೂ ಧರ್ಮವನ್ನು ಬಿಟ್ಟರೆ ಸಾಹಿತ್ಯ ಸೃಷ್ಟಿಯೇ ಅಸಾಧ್ಯ ಎಂಬಷ್ಟರ ಮಟ್ಟಿಗೆ ಸಾಹಿತ್ಯ ಧರ್ಮಕ್ಕೆ ಒತ್ತುಗೋಲಾಗಿ ಮೂಡಿಬಂದಿದೆ.

**ಕೊನೆ ಟಿಪ್ಪಣಿ:**

1. ವೀರಣ್ಣ, ಸಿ. (2017). *ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ.* ಪು.ಸಂ–114
2. ಅದೇ. ಪು.ಸಂ–183
3. ಅದೇ. ಪು.ಸಂ–194
4. ಅದೇ. ಪು.ಸಂ–247
5. ಅದೇ. ಪು.ಸಂ–251
6. ಅದೇ. ಪು.ಸಂ–262
7. ಅದೇ. ಪು.ಸಂ–202
8. ಅದೇ. ಪು.ಸಂ–348
9. ಅದೇ. ಪು.ಸಂ–350
10. ಕಾಡದೇವರಮಠ, ಎಸ್. ಎಸ್. (2017). *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ.* ಪು.ಸಂ–179

**ಪರಾಮರ್ಶನ ಗ್ರಂಥಗಳು**


- ಬಸವರಾಜ, ಎಲ್. (ಸಂ.) (2012). *ಸರ್ವಜ್ಞನ ವಚನಗಳು.* ಗೀತಾ ಬುಕ್ ಹೌಸ್
- ಭೋಜರಾಜ ಪಾಟೀಲ. (1995). *ನಾಗರಖಂಡ–70 ಒಂದು ಅಧ್ಯಯನ.* ಆನಂದಪುರಂ.

- ಚೆನ್ನಕ್ಕ ಪಾವಟೆ. (2003). *ಶಾಸನ ಸಂಜೀವಿನಿ.* ಚೆನ್ನಗಂಗಾ ಪ್ರಕಾಶನ.
- ಕಾಡದೇವರಮಠ, ಎಸ್. ಎಸ್. (2009). *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ.* ವಿದ್ಯಾನಿಧಿ ಪ್ರಕಾಶನ.
- ಕಲಬುರ್ಗಿ, ಎಂ.ಎಂ. (ಪ್ರ.ಸಂ.) (2001). *ಬಸವ ಯುಗದ ಮಹಾಸಂಪುಟ.* ಕನ್ನಡ ಪುಸ್ತಕ ಪ್ರಾಧಿಕಾರ.
- ಕೊಕ್ಕನವರ, ವಾಯ್. ವಾಯ್. (2016). *ಕನ್ನಡ ಸಾಹಿತ್ಯ ಚರಿತ್ರೆಯ ಹೆಜ್ಜೆಗಳು.* ಸೌಮ್ಯ ಪ್ರಕಾಶನ.
- ತಿಪ್ಪೇರುದ್ರಸ್ವಾಮಿ, ಎಚ್. (1998). *ಕರ್ನಾಟಕ ಸಂಸ್ಕೃತಿ ಸಮೀಕ್ಷೆ.* ಮೈಸೂರು.
- ವೀರಣ್ಣ, ಸಿ. (2017). *ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ.* ನವಕರ್ನಾಟಕ ಪಬ್ಲಿಕೇಷನ್.